ಕಾಗೆಗಳಿಗೆ ಕಾಡುಪಾಪ ಕಣ್ಣಿಗೆ ಬಿತ್ತು. ದುರ್ಬಲ, ಅಸಹಾಯಕವಾದ, ಅರ್ಧ ಅಡಿಯಷ್ಟು ಚಿಕ್ಕದಾದ, ಕೆಲವೇ ಗ್ರಾಂ ತೂಕದ ಕಾಡುಪಾಪ ಹತ್ತಾರು ಕಾಗೆಗಳಿಗೆ ಮೃಷ್ಟಾನ್ನವಾಗುತ್ತದೆ. ತನ್ನನ್ನು ತಾನು ರಕ್ಷಿಸಿಕೊಳ್ಳಲು ಕಾಡುಪಾಪ ಹಿಸ್ಸೆಂದು ಶಬ್ದ ಮಾಡಬಹುದು ಅಷ್ಟೆ. ಅದು ಕಾಗೆಗಳ ಕಾಕಾ ಗಲಾಟೆಯಲ್ಲಿ ಕೇಳುವುದೂ ಇಲ್ಲ. ಫೋನ್ ಮಾಡಿದ ಸ್ನೇಹಿತರಿಗೆ ನಾನು ಬರುವವರೆಗೆ ಕಾಗೆಗಳಿಂದ ರಕ್ಷಿಸಿ ಎಂದು ಹೇಳುವಾಗ ಅದು ಕಾಡುಪಾಪವಿರಬಹುದು ಎಂಬ ಕಲ್ಪನೆಯೇ ಇರಲಿಲ್ಲ. ಬಹುಶಃ ಗೂಬೆಯಿರಬಹುದು ಎಂದುಕೊಂಡಿದ್ದೆ.

ಸ್ಥಳಕ್ಕೆ ಹೋದಾಗ ಆ ಪಕ್ಷಿ ಸುಮಾರು ಹದಿನೈದು ಅಡಿ ಎತ್ತರದ ಗೊಬ್ಬರದ ಗಿಡದ ತುದಿಯಲ್ಲಿತ್ತು. ಅದನ್ನು ಹಿಡಿಯುವ ಬಗೆ ಹೇಗೆ? ಹಾರಲು ಹೋಗಿ ಮತ್ತೆ ಕಾಗೆಗಳ ಪಾಲಾಗುತ್ತದೆಂಬ ಚಿಂತೆ ಕಾಡಿತು. ಆದರೆ, ಕಾಡುಪಾಪದ ಕಣ್ಣನ್ನು ನೋಡಿ ಬೆದರಿದ ಯುವಕರು; 'ಇಲ್ಲ, ಅದು ಹಾರುವುದಿಲ್ಲ'ವೆಂಬ ಅಭಯ ನೀಡಿದರು. ನಿಧಾನವಾಗಿ ಗೊಬ್ಬರದ ಗಿಡದ ರೆಂಬೆಯನ್ನು ಬಗ್ಗಿಸಿದೆ. ಹತ್ತಿರ ಬಂದಾಗ ನೋಡಿದರೆ, ಅದು ಪಾಪದ ಕಾಡುಪಾಪ! ಅಪಾಯಕಾರಿ ಪ್ರಾಣಿಯಂತೂ ಅಲ್ಲವೇ ಅಲ್ಲವೆಂದು ಕೈಯಲ್ಲಿ ಹಿಡಿದರೆ, ತನ್ನ ಕಿರಿದಾದ ಹಲ್ಲುಗಳಿಂದ ತೋರುಬೆರಳಿಗೆ ಕಚ್ಚಿ ಹಿಸ್ ಎಂದಿತು.

ಬೆದರಿದ ಕಾಡಿನ ಕೂಸು ತನ್ನ ನೀಳ ಕಾಲನ್ನು ಬಳಸಿಕೊಂಡು ಪಕ್ಕದ ಮತ್ತೊಂದು ಚಿಕ್ಕ ರೆಂಬೆಗೆ ದಾಟಿ ಮತ್ತೆ ಮೇಲೇರಿತು. ಹಂಜಿಯಷ್ಟು ಮೃದುವಾದ ಕಾಡುಪಾಪವನ್ನು ಕೈಯಲ್ಲಿ ಹಿಡಿಯುವುದು, ಅದು ಬಿಡಿಸಿಕೊಳ್ಳುವ ಪ್ರಯತ್ನ ಮಾಡುವುದು ಹಾಗೂ ಅದಕ್ಕೆ ಅಪಾಯವಾಗುವುದು ಇತ್ಯಾದಿಗಳನ್ನು ಲೆಕ್ಕ ಹಾಕಿ ಅದನ್ನು ಕೈಯಲ್ಲಿ ಮುಟ್ಟುವುದೇ ಬೇಡವೆಂಬ ತೀರ್ಮಾನಕ್ಕೆ ಬಂದೆ. ಬೇಲಿ ಸವರುವ ಯುವಕರ ಹತ್ತಿರ ಕತ್ತಿಯಿತ್ತಲ್ಲ; ಅದನ್ನು ಬಳಸಿ ಗೊಬ್ಬರದ ಗಿಡದ ಆ ಚಿಕ್ಕ ರೆಂಬೆಯ ಬುಡವನ್ನು ಕಡಿದೆ. ಇಡೀ ರೆಂಬೆ ಈಗ ನನ್ನ ಕೈಯಲ್ಲಿ, ಆರಡಿ ರೆಂಬೆ ತುದಿಯಲ್ಲಿ ಅರ್ಧ ಅಡಿ ಉದ್ದದ, ನೂರೈವತ್ತು ಗ್ರಾಂ ತೂಕದ ಕಾಡುಪಾಪ!

ಪಶ್ಚಿಮಘಟ್ಟದ ಮಳೆಕಾಡು ಹಾಗೂ ಎಲೆಯುದುರುವ ತೇವಾಂಶಭರಿತ ಕಾಡುಗಳ ಮರಗಳಲ್ಲಿ ವಾಸಿಸುವ ಕಾಡುಪಾಪ, ಮರದಲ್ಲಿರುವ ಇರುವೆ, ಗೆದ್ದಲು, ಮಿಡತೆ, ಇತ್ಯಾದಿಗಳನ್ನು ಕಾದು ಕುಳಿತು ಭಕ್ಷಿಸುತ್ತದೆ. ನಿದ್ರಿಸುತ್ತಿರುವ ಓತಿಕ್ಯಾತವೂ ಅದರ ಆಹಾರವಾಗುತ್ತದೆ. ರೈತರ ಬೆಳೆಗೆ ಹಾನಿ ಮಾಡುವ ಅನೇಕ ಪೀಡೆ ಕೀಟಗಳು ಕಾಡುಪಾಪದ ಮುಖ್ಯ ಆಹಾರ. ಹಾಗಾಗಿ ಅದು ರೈತಮಿತ್ರ ಎನ್ನಲಡ್ಡಿಯಿಲ್ಲ. ನೆಲಕ್ಕೆ ಇಳಿಯುವುದೇ ಇಲ್ಲವೆನ್ನುವಷ್ಟು ಅಪರೂಪದ ನೆಲದ ನಂಟು ಅದಕ್ಕಿದೆ. ನೆಲಕ್ಕೆ ಇಳಿದರೆ ಅದು ಅಪಾಯಕ್ಕೆ ಸಿಲುಕುವ ಸಂದರ್ಭ ಹೆಚ್ಚು. ಅದರಲ್ಲೂ ಮಾನವ ಇದಕ್ಕೆ ಮುಖ್ಯವಾದ ಶತ್ರು. ಕೆಲವರು ಕೆಟ್ಟ ಶಕುನವೆಂದು ಬಡಿದು ಕೊಲ್ಲುವರಾದರೆ, ಇನ್ನೂ ಹಲವರು ಅದನ್ನು ಮನೆಯಲ್ಲಿ ಶೋಕಿಗಾಗಿ ಸಾಕಲು ಹಿಡಿಯುತ್ತಾರೆ. ವಿವಿಧ ಕೋನಗಳಿಂದ ಫೋಟೊ ಕ್ಲಿಕ್ಕಿಸುವ ವನ್ಯಜೀವಿ ಛಾಯಾಗ್ರಾಹಕರು ಇದಕ್ಕೆ ಕೊಂಚ ಮಟ್ಟಿಗೆ ಮುಳುವಾಗಿದ್ದಾರೆ.

ಮನುಷ್ಯನ ಹುಡುಕಾಟಕ್ಕೆ, ಕುತೂಹಲಕ್ಕೆ ಹೇಗೆ ಮಿತಿಯಿಲ್ಲವೋ; ಹಾಗೆಯೇ ಅವನ ಮೂಢತನಕ್ಕೂ ಮಿತಿಯಿಲ್ಲ. ಕಾಡುಪಾಪದ ವಿವಿಧ ಅಂಗಗಳ ಸೇವನೆಯಿಂದ ವಿವಿಧ ರೋಗಗಳು ಗುಣವಾಗುತ್ತವೆ ಎಂದು ನಂಬುವವರಿದ್ದಾರೆ. ಪ್ರಪಂಚದ ಎಲ್ಲಾ ಬಗೆಯ ಜೀವಿವೈವಿಧ್ಯಗಳಿಗೆ ಹೇಗೆ ಮನುಷ್ಯನೇ ಭಯಾನಕ ಶತ್ರುವೋ ಹಾಗೆಯೇ ಕಾಡುಪಾಪವು ಇವನ ಭಯಾನಕತೆಗೆ ಬಲಿಯಾಗುವಲ್ಲಿ ಮುಖ್ಯ ವಾನರ ಸಂತತಿಯಾಗಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆಯ (1972) ಪರಿಚ್ಛೇದ 1ರಲ್ಲಿ ಬರುವ ಕಾಡುಪಾಪದ ಸಂತತಿಯನ್ನು ಅಳಿವಿನಂಚಿನಲ್ಲಿರುವ ವಾನರ ಸಂತತಿಯೆಂದು IUCN (ಇಂಟರ್ ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್) ಪಟ್ಟಿಯಲ್ಲಿ ಹೇಳಲಾಗಿದೆ. ಇದನ್ನು ಹಿಡಿಯುವುದು, ಸಾಕುವುದು, ಕೊಲ್ಲುವುದು ಅಥವಾ ಇದರ ಯಾವುದೇ ಅಂಗಾಂಗಗಳನ್ನು ಮಾರಾಟ ಮಾಡುವುದು ಭಾರತೀಯ ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ. ಹಗಲು ಹೊತ್ತಿನಲ್ಲಿ ಕಣ್ಣು ಸರಿಯಾಗಿ ಕಾಣದ ಕಾಡುಪಾಪ, ರಾತ್ರಿ ವೇಳೆಯಲ್ಲಿ ಚುರುಕಾಗುತ್ತವೆ. ಆದ್ದರಿಂದ, ಅದನ್ನು ಸಂಜೆಯವರೆಗೆ ಇಟ್ಟುಕೊಳ್ಳಬೇಕು, ಕಾನೂನು ಪ್ರಕಾರ ಹಾಗೆ ಇಟ್ಟುಕೊಳ್ಳುವ ಹಾಗಿಲ್ಲ.

ಗೊಬ್ಬರದ ರೆಂಬೆಯನ್ನು ಕೈಯಲ್ಲಿ ಹಿಡಿದುಕೊಂಡೇ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗೆ ಫೋನ್ ಮಾಡಿದೆ. ಇಷ್ಟು ಹೊತ್ತಿಗೆ ಇವರು ತನಗೆ ಅಪಾಯ ಮಾಡಲಾರರು ಎಂದು ಕಾಡಿನ ಪಾಪಕ್ಕೆ ಖಾತ್ರಿಯಾಗಿತ್ತು. 'ಅಲ್ಲಿ ಇಲ್ಲಿ ಏಕೆ ಬಿಡುತ್ತೀರಿ, ನಿಮ್ಮದೇ ಖಾಸಗಿ ಕಾಡು ಇದೆಯಲ್ಲಾ, ಅಲ್ಲೇ ಬಿಡಿ, ಸುರಕ್ಷಿತವಾಗಿರುತ್ತದೆ' ಎಂದು ಅಧಿಕಾರಿ ಹೇಳಿದರು. ವನ್ಯಜೀವಿ ಛಾಯಾಗ್ರಹಣದಲ್ಲಿ ತೊಡಗಿಕೊಂಡ ಪರಿಚಯದ ಯುವಕರಿಬ್ಬರು ಬಂದರು. ಯಾವುದಕ್ಕೂ ಇರಲಿ ಎಂದು ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಬರಲು ಹೇಳಿದ್ದೆ.

ಕಾಡುಪಾಪಕ್ಕೆ ಯಾವುದೇ ಕಿರಿಕಿರಿಯಾಗದಂತೆ ಒಂದಷ್ಟು ಉತ್ತಮ ಫೋಟೊಗಳನ್ನು ಪಡೆದೆವು. ರಟ್ಟಿನ ಪೆಟ್ಟಿಗೆಯೊಂದಕ್ಕೆ ಕಾಡುಪಾಪುವಿಗೆ ಉಸಿರಾಡಲು ಅನುಕೂಲವಾಗುವಂತೆ ಹಲವಾರು ತೂತುಗಳನ್ನು ಕೊರೆದು, ಅದಕ್ಕೊಂದಿಷ್ಟು ಸೊಪ್ಪು ಹಾಕಿ ಮೆತ್ತೆ ತಯಾರಿಸಿದೆವು. ಅಷ್ಟರಲ್ಲಿ ಒಂದು ಚಿಕ್ಕ ಮಿಡತೆಯನ್ನು ಹಿಡಿದು ಅದಕ್ಕೆ ಕೊಡುವ ಪ್ರಯತ್ನ ಫಲಿಸಲಿಲ್ಲ. ಕಷ್ಟಪಟ್ಟು ಹಿಡಿದುಕೊಂಡು ಬಂದಿದ್ದ ಮಿಡತೆ, ಕಾಡುಪಾಪಕ್ಕೆ ಆಹಾರವಾಗುವುದರೊಳಗಾಗಿ ಚಟ್ಟನೆ ತಪ್ಪಿಸಿಕೊಂಡು ಹಾರಿ ಹುಲ್ಲಿನ ಸಂದಿಯಲ್ಲಿ ಮರೆಯಾಯಿತು.

ನಮ್ಮ 21 ಎಕರೆ ಖಾಸಗಿ ಕಾಡು 'ಉಷಾಕಿರಣ', ಹಲವು ವನ್ಯಜೀವಿಗಳಿಗೆ ನೆಲೆಯಾಗಿದೆ. ಈ ಹಿಂದೆ ಜೀವಿವೈವಿಧ್ಯಗಳನ್ನು ದಾಖಲು ಮಾಡಲು ಬಂದಿದ್ದ ವನ್ಯಜೀವಿ ತಜ್ಞರೊಬ್ಬರು, ಉಷಾಕಿರಣದಲ್ಲಿ ಕಾಡುಪಾಪ ಇದೆ ಎಂದು ದಾಖಲು ಮಾಡಿದ್ದರು. ಪಕ್ಕದ ತಮಿಳುನಾಡಿನಲ್ಲಿ ಸುಮಾರು 11 ಸಾವಿರ ಹೆಕ್ಟೇರ್ ಮಳೆಕಾಡು ಪ್ರದೇಶವನ್ನು ಕಾಡುಪಾಪ ಸಂರಕ್ಷಿತ ಅರಣ್ಯವೆಂದು ಇತ್ತೀಚಿನ ವರ್ಷದಲ್ಲಿ ಘೋಷಣೆ ಮಾಡಿ ಸಂರಕ್ಷಿಸಿದ್ದಾರೆ. ಇವತ್ತು ಸಿಕ್ಕಿದವನು ಕಾಡುಪೋರ. ಉಷಾಕಿರಣದಲ್ಲೊಂದು ಕಾಡುಪೋರಿಯಿದ್ದಲ್ಲಿ, ಅದಕ್ಕೆ ಇವ ಜೊತೆಯಾದಲ್ಲಿ, ಅಲ್ಲೊಂದಿಷ್ಟು ಅದರ ಸಂತತಿ ಬೆಳೆದೀತು; ಸುರಕ್ಷತೆ ಇರುವುದರಿಂದ ಉಳಿದೀತು ಎಂಬ ಆಸೆಯಿಂದ...

ಪ್ರತಿಕ್ರಿಯಿಸಿ: feedback@sudha.co.in



ನಮ್ಮಿಂದ ಎಲ್ಲಾ
ಕಸಿದುಕೊಂಡು
ಅನಾಥರಾಗಿ ಮಾಡಿದಿರಿ;
ಹೇ ಮನುಜಾ ಇದು
ನ್ಯಾಯವೇ?